ಹೆಂಚುಗಳಿಗೆ ಬೇಡಿಕೆ ಹೆಚ್ಚಾಗುತ್ತಿದ್ದಂತೆಯೇ ತಂಕು ಶೆಟ್ಟರ ಆವೆಮಣ್ಣಿಗೂ ಬೇಡಿಕೆ ಹೆಚ್ಚಾಯಿತು. ಶೆಟ್ಟರು ಮತ್ತೂ ಕೆಲವು ಗದ್ದೆಗಳನ್ನೂ ಕಾರ್ಖಾನೆಗಳಿಗೆಂದೇ ಮೀಸಲಿಟ್ಟರು. ತಂಕು ಶೆಟ್ರು ತಮ್ಮ ಉಳಿದ ಗದ್ದೆಗಳಲ್ಲಿ ಎಣೆಲು ಬೆಳೆಯನ್ನು ಜೋರಾಗಿಯೇ ಬೆಳೆಯುತ್ತಿದ್ದರು. ಅರ್ಧ ಗದ್ದೆಗಳಲ್ಲಿ ಸುಗ್ಗಿ ಬೆಳೆ ಬೆಳೆಯಬಹುದಾಗಿದ್ದರೂ ಕೊಳಕೆ ಬೆಳೆ ತೆಗೆಯಲು ನೀರು ಸಾಕಾಗುತ್ತಿರಲಿಲ್ಲ. ಆದ್ದರಿಂದ, ಸಾಂಬಾರ ಸೌತೆ ಮತ್ತಿತರ ತರಕಾರಿಗಳು, ಹುರುಳಿ ಮತ್ತು ಪದವಿನ ಮೇಲಿನವರಿಗೆ ಗೆಣಸುಬಳ್ಳಿಯನ್ನು ಬೆಳೆಯುತ್ತಿದ್ದರು. ಸ್ವಂತ ಪರಿಶ್ರಮದಿಂದ ತಂಕು ಶೆಟ್ಟರು ಊರಿಗೆ ದೊಡ್ಡ ಕುಳ ಎನಿಸಿಕೊಂಡಿದ್ದರು.

ಮಳೆಗಾಲ ಮುಗಿದು ಶೀತ ಕಡಿಮೆಯಾಗಿ ಬೇಸಿಗೆ ಶುರುವಾಗುತ್ತಲೇ ಗದ್ದೆಗಳು ಒಣಗಿ ಮಣ್ಣು ಅಗೆಯಲು ಸಲೀಸಾಗುತ್ತಿತ್ತು. ಆ ಕೆಲಸಕ್ಕೆಂದೇ ತಂಕು ಶೆಟ್ಟರು ಹತ್ತು ಹನ್ನೆರಡು ಆಳುಗಳನ್ನು ಹಚ್ಚಿದ್ದರು. ಮಣ್ಣು ತುಂಬಿಸಿಕೊಂಡು ಹೋಗಲು ಕಟಾವು ಮುಗಿದ ಒಣ ಗದ್ದೆಗಳಿಗೆ ಲಾರಿಗಳು ಆರಾಮಾಗಿ ಇಳಿಯುತ್ತಿದ್ದವು. ಗದ್ದೆಗಳ ಸನಿಹದಲ್ಲೇ ತಂಕು ಶೆಟ್ಟರು ಸೋಗೆಯ ತಾತ್ಕಾಲಿಕ ಶೆಡ್ಡುಗಳನ್ನು ನಿರ್ಮಿಸಿ ಸಪೂರವಾದ ಬೆಂಚುಗಳನ್ನು ಇರಿಸಿದ್ದರು. ಲಾರಿ ಡ್ರೈವರುಗಳು ಅಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು.

ತಂಕು ಶೆಟ್ಟರ ಗದ್ದೆಯ ಮಣ್ಣಿನಿಂದಲೇ ಬಪ್ತಿಸ ಮತ್ತು ಸಿಲಾ ಕಿರಿಸ್ತಾನ ದೇವರುಗಳ ಇಮಾಜುಗಳನ್ನು (ಮೂರ್ತಿಗಳನ್ನು) ಮಾಡಲು ಬಳಸುತ್ತಿದ್ದರು. ತನ್ನ ಗದ್ದೆಯ ಮಣ್ಣಿನಿಂದ ದೇವರುಗಳನ್ನು ಮಾಡುತ್ತಿದ್ದರಿಂದ ತಂಕು ಶೆಟ್ಟರು ಈವರೆಗೆ ಅಣ್ಣತಮ್ಮಂದಿರಿಂದ ದುಡ್ಡು ತೆಗೆದುಕೊಂಡಿರಲಿಲ್ಲ. "ಬತ್ತು ಪರ್ಬು, ನನ್ನ ಗದ್ದೆಯ ಮಣ್ಣಿನಿಂದ ನೀವು ಮಾಡಿದ ದೇವರುಗಳನ್ನು ನಿಮ್ಮ ಜನ ಪೂಜಿಸಿ ಅಡ್ಡ ಬೀಳುತ್ತಿದ್ದಾರಲ್ಲಾ, ಆ ಆಶೀರ್ವಾದವೊಂದೇ ಸಾಕು ನನಗೆ ಮತ್ತು ನನ್ನ ಕುಟುಂಬಕ್ಕೆ... ದುಡ್ಡು ಖಂಡಿತ ಬೇಡ." ಎಂದು ತಂಕು ಶೆಟ್ಟರು ಯಾವಾಗಲೂ ಹೇಳುವುದಿತ್ತು.

★★★

ಕರಿಕಲ್ಲು ಪದವುವಿನ ಅನಂತರ ಸಿಗುವ ಘಾಟಿ ಇಳಿದರೆ ಸಿಗುವುದೇ ಮಂದಾರ ಬೈಲು. ಅವನು, ಅವನ ಹೆಂಡತಿ ಜುವಾನ್ನಾ, ತಮ್ಮ ಸಿಲಾ ಮತ್ತು ಅವನ ಹೆಂಡತಿ ಸೊಬಿನಾ ಆವೆಮಣ್ಣು ಹೊತ್ತುಕೊಂಡು ಬರಲು ಮಂದಾರ ಬೈಲಿಗೆ ಹೋಗುವುದಿತ್ತು. ಬುಟ್ಟಿಗಳಿಗೆ ಮಣ್ಣನ್ನು ತುಂಬಿಸಿ ತಲೆಯ ಮೇಲೆ ಹೊತ್ತು ಘಾಟಿ ಏರಿ ವಾಪಸ್ಸು ಬರುತ್ತಿದ್ದರು. ಹೋಗುವಾಗ ಹೆಗಲ ಮೇಲೆ ಗುದ್ದಲಿಯನ್ನು ಹೊತ್ತುಕೊಂಡೇ ಹೋಗುತ್ತಿದ್ದರು. ದಿನಕ್ಕೆ ಎರಡು ಮೂರು ಬಾರಿ ಹೋಗಿ ಬರುವಾಗ ಕತ್ತಲಾಗುತ್ತಿತ್ತು. ವರ್ಷದಲ್ಲಿ ಎರಡು ಮೂರು ಬಾರಿ, ಪ್ರತ್ಯೇಕವಾಗಿ ಮಳೆಗಾಲ ಶುರುವಾಗುವ ಮುನ್ನ ಅವರು ಕಿಲಾತನ ಎತ್ತಿನ ಬಂಡಿಗೆ ಹೇಳಿ ಕಳಿಸುತ್ತಿದ್ದರು. ಎಂದಿನಂತೆ ಈ ವರ್ಷವೂ ಅವರು ಕಿಲಾತನ ಬಂಡಿಯಲ್ಲಿ ಮಣ್ಣನ್ನು ಹೇರಿಕೊಂಡು ಬಂದಿದ್ದರು.

''ಬಾಬ್ಬಿ... ಬಯ್ಯಾ... ಮಣ್ಣು ಗುಡ್ಡೆಯ ಮೇಲೆ ಟಾರ್ಪಾಲು, ಮಡಲು ಹೊಚ್ಚಿ ಮಕ್ಕಳೇ...'' ಕೊನೆಯ ಮಗ ಜೊಯೆಲ್ ಮತ್ತು ನಡುವಿನ ಮಗಳು ಗ್ಲೋರಿಯಾಳಿಗೆ ಪ್ರೀತಿಯಿಂದ ಕರೆಯುವ ಹೆಸರುಗಳಿಂದ ಕರೆ ಕೊಟ್ಟು ಕಿಲಾತನಿಗೆ ಬಾಡಿಗೆ ಕೊಡಲು ಜೇಬಿನಿಂದ ಪಾಕೀಟನ್ನು ಹೊರತೆಗೆದ. ಅದರಲ್ಲಿ ದುಡ್ಡು ಇರಲಿಲ್ಲವೆಂದು ಅವನಿಗೆ ಮೊದಲೇ ಗೊತ್ತಿತ್ತು! ಖಾಲಿ ಪಾಕೀಟನ್ನು ಕಿಲಾತನಿಗೆ ತೋರಿಸುತ್ತಾ, ''ಅಯ್ಯೋ!... ನನ್ನ ಪಾಕೀಟು ಖಾಲಿಯಾಗಿದೆ ಕಿಲಾತ!... ನಾಳೆ ಇಮಾಜುಗಳ ದುಡ್ಡು ಬರುವುದಿದೆ. ನಾನೇ ನಿನ್ನ ಮನೆಗೆ ಬಂದು ಕೊಡುತ್ತೇನೆ, ಆಯ್ತಾ?'' ಎಂದ.

ಕಿಲಾತನ ಮುಖ ಕಪ್ಪಿಟ್ಟಿತು. ''ಎತ್ತುಗಳಿಗೆ ಹಿಂಡಿ ತರುವುದಕ್ಕೂ ನನ್ನ ಬಳಿ ಒಂದು ರೂಪಾಯಿ ಇಲ್ಲ ಬತ್ತು ಮಾಮು... ನೀನು ದುಡ್ಡಿಲ್ಲ ಅಂತ ಮೊದಲೇ ಹೇಳಿದಿದ್ದರೆ ನಾನು ಖಂಡಿತ ಬರುತ್ತಿರಲಿಲ್ಲ.